Impact Factor (QJIF): 8.47 E-ISSN: 2583-1615, P-ISSN: 3049-3498

International Journal of Research in Academic World

Received: 18/March/2026 IJRAW: 2026; 5(5):84-87 Accepted: 20/April/2026

# ಪಂಪನ ಕಾಲದ ರಾಜನೀತಿಯ ವಿಶ್ಲೇಷಣಾತ್ಮಕ ಕೃತಿಯಾಗಿ ವಿಕ್ರಮಾರ್ಜುನ ವಿಜಯ – ಒಂದು ಹೊಸ ದೃಷ್ಟಿಕೋನ

**[*1]ಸ್ಮಿತಾ.ಹೆಚ್.ಎಸ್**

[*1]ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು, ಕರ್ನಾಟಕ, ಭಾರತ.

**ಸಾರಾಂಶ**

ಪ್ರಸ್ತುತ ಲೇಖನದಲ್ಲಿ ಪಂಪನು ತನ್ನ ಮಹಾಕಾವ್ಯ ವಿಕ್ರಮಾರ್ಜುನ ವಿಜಯದಲ್ಲಿ ಚಿತ್ರಿಸಿರುವ ಮಹಾ ಭಾರತದ ಕಥನ ನಿರೂಪಣೆಯು ಅಂದಿನ ರಾಜಕೀಯ ವಿದ್ಯಮಾನಗಳ ಮತ್ತು ಪ್ರಚಲಿತವಾಗಿದ್ದ ತಾತ್ವಿಕ ಚಿಂತನೆಗಳ ಕಾವ್ಯ ಸ್ವರೂಪವೇ ಆಗಿದೆ ಎಂಬ ಅಭಿಪ್ರಾಯವನ್ನು ಕುರಿತು ವಿಶ್ಲೇಷಿಸಲಾಗಿದೆ. ಮೂಲ ಮಹಾ ಭಾರತದ ಕತೆಯು ಹಲವಾರು ಹಂತಗಳಲ್ಲಿ ಪರಿಷ್ಕೃತಗೊಂಡು ಸುದೀರ್ಘವಾದ ಕಥಾನಕವಾಯಿತು ಎಂಬ ಕಾವ್ಯ ಪ್ರಮಾಣಿತ ವಾದವಿದೆ. ಮಹಾ ಭಾರತದ ಮೂಲ ಕತೆಯು ವಿವಿಧ ಭಾಷೆಯ ಆವೃತ್ತಿಗಳ ಮೂಲಕ ನೂತನ ರೀತಿಯಲ್ಲಿ ಪ್ರಣೀತಗೊಂಡು ಪ್ರಚಲಿತ ರಾಜಕೀಯ ವಿದ್ಯಮಾನಗಳ ಸಾರ ಸಂಗ್ರಹವಾಗಿದ್ದವು ಎಂಬ ಕನ್ನಡ ಸಾಹಿತ್ಯ ಮತ್ತು ಸಾರಸ್ವತ ಲೋಕದ ಅಭಿಪ್ರಾಯಗಳು ಇವೆ. ಅರಸೊತ್ತಿಗೆಗಳಲ್ಲಿ ಆಶ್ರಯ ಪಡೆದಿರುತ್ತಿದ್ದ ಕವಿಗಳು ತಮ್ಮ ಆಶ್ರಯದಾತ ಅರಸರನ್ನು ಉಲ್ಲೇಖಿಸಿ ವ್ಯಕ್ತಿಗತವಾಗಿ ಅವರನ್ನು ಕಥಾ ನಾಯಕನಂತೆ ಬಿಂಬಿಸುವ ಕಾವ್ಯ ಪ್ರಯೋಗಗಳನ್ನು ಮಾಡುತ್ತಲೇ ಬಂದಿದ್ದಾರೆ. ಇದಕ್ಕೆ ಹಿನ್ನೆಲೆಯಾಗಿ ಪಂಪನು ತನ್ನ ಆಶ್ರಯದಾತ ಅರಸನ ಕುರಿತು ರಚಿಸಿರುವ ವಿಕ್ರಮಾರ್ಜುನ ವಿಜಯ ಎಂಬ ಚಂಪೂ ಕಾವ್ಯವು 9–10 ನೇ ಶತಮಾನಗಳ ರಾಜಕೀಯ ಬೆಳವಣಿಗೆಗಳ ಪ್ರತಿಬಿಂಬದಂತೆ ಇದ್ದು ಈ ಕೃತಿಯನ್ನು ರಾಜನೀತಿಯ ಹಿನ್ನೆಲೆಯಲ್ಲಿ ಅವಲೋಕಿಸುವ ಪ್ರಯತ್ನವನ್ನು ಮಾಡುವುದು ಮತ್ತು ವೇಮುಲವಾಡದ ಸುತ್ತ ಮುತ್ತ ಇರುವ ಪುರಾತತ್ವ ನೆಲೆಗಳನ್ನು ಪುನರ್ ಸಂಶೋಧಿಸುವ ಅನಿವಾರ್ಯತೆ ಕುರಿತು ಸಂಶೋಧಕರ ಗಮನ ಸೆಳೆಯುವ ಮತ್ತು ವೇಮುಲವಾಡದ ಇಮ್ಮಡಿ ಅರಿಕೇಸರಿ ಅರಸನ ಬಗ್ಗೆ ಈಗಾಗಲೇ ದೊರಕಿರುವ ಸಾಹಿತ್ಯಿಕ ಮತ್ತು ಪುರಾತತ್ವ ಆಕರಗಳನ್ನು ಮರು ಶೋಧಿಸುವ ಅಗತ್ಯತೆ ಕುರಿತು ವಿವರಿಸುವ ಪ್ರಯತ್ನ ಮಾಡಲಾಗಿದೆ.

**ಪ್ರಮುಖ ಪದ:** ಪಂಪ, ವಿಕ್ರಮಾರ್ಜುನ ವಿಜಯ, ರಾಜನೀತಿಯ ವಿಶ್ಲೇಷಣೆ.

## ಪರಿಚಯ

ವೆಂಗಿ ಚಾಲುಕ್ಯ ವಂಶದ ಇಮ್ಮಡಿ ಅರಿಕೇಸರಿ ಎಂಬ ವೇಮುಲ ವಾಡ ಪ್ರಾಂತ್ಯದ ಅರಸನ ಆಸ್ಥಾನದ ಕವಿಯಾಗಿದ್ದ ಪಂಪನು ಗದ್ಯ ಹಾಗೂ ಪದ್ಯ ಮಿಶ್ರಣದ ಚಂಪೂ ಶೈಲಿಯಲ್ಲಿ ಆದಿ ಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಎಂಬ ಕನ್ನಡ ಕೃತಿಗಳನ್ನು ರಚಿಸಿದ್ದಾನೆ. ಕನ್ನಡ ಸಾಹಿತ್ಯದ ರತ್ನತ್ರಯರು ಎಂಬ ಅಭಿದಾನ ಹೊಂದಿದ ಮೂವರು ಪ್ರಮುಖ ಕವಿಗಳಲ್ಲಿ ಪಂಪ, ಪೊನ್ನ ಮತ್ತು ರನ್ನ ಪ್ರಮುಖರಾಗಿದ್ದು ಇದರಲ್ಲಿ ಪಂಪನು ಕನ್ನಡ ಸಾಹಿತ್ಯ ಕ್ಷೇತ್ರದ ಯುವ ಪ್ರವರ್ತಕ ಎಂದೇ ಕರೆಯಲ್ಪಟ್ಟಿದ್ದಾನೆ. ಅವನ ಭಾಷಾ ಶೈಲಿ, ಅವನ ವರ್ಣನೆಯ ಉಪಮಾನೋಪೇಯಗಳು, ಅವನ ಛಂದಸ್ಸು ಮತ್ತು ಕಥಾ ಲಹರಿಗಳು ಅನುಪಮ ಎಂದೇ ಕರೆಯಲ್ಪಟ್ಟಿದ್ದು ಇವನ ಕಾವ್ಯಾಲಂಕಾರದ ಮೋಡಿಗೆ ಆಕರ್ಷಿತರಾದ ಓದುಗರು ಇವನ ಕಾಲವನ್ನು ಕನ್ನಡ ಸಾಹಿತ್ಯದಲ್ಲಿ ಪಂಪ ಯುಗ ಎಂದೇ ಗುರುತಿಸಿದ್ದಾರೆ.

## ಪಂಪನ ಕಾವ್ಯದಲ್ಲಿ ರಾಜನೀತಿಯ ಪ್ರತಿಧ್ವನಿಗಳು

ಆದಿ ಕವಿ ಪಂಪನು ರಚಿಸಿದ ಮಹಾ ಕಾವ್ಯ ವಿಕ್ರಮರ್ಜುನ ವಿಜಯ ಮಹಾ ಭಾರತದ ಸವಿಸ್ತಾರವಾದ ಕಥೆಯನ್ನು ಮೂಲವಾಗಿ ಹೊಂದಿದ್ದು ಮಹಾಭಾರತದ ಪ್ರಮುಖ ಪಾತ್ರವೂ, ಅಸಾಮಾನ್ಯ ವೀರನೂ ಅಪ್ರತಿಮ ಶೂರನೂ ಅದ ಅರ್ಜುನನಿಗೆ ತನ್ನ ಆಶ್ರಯದಾತ ಅರಸನಾದ ವೇಮುಲವಾಡ ಪ್ರಾಂತ್ಯದ ಚಾಲುಕ್ಯ ಅರಸ ಇಮ್ಮಡಿ ಅರಿಕೇಸರಿಯನ್ನು ಸಮೀಕರಿಸಿ ರಚಿಸಲಾದ ಬೃಹತ್ ಚಂಪೂ ಕಾವ್ಯ ಆಗಿದೆ. ಮಹಾಭಾರತದ ಅರ್ಜುನನ ಪರಾಕ್ರಮಗಳು, ಸಂಘರ್ಷಗಳು ಮತ್ತು ಅವನ ವಿಜಯಗಳ ದಾಖಲೆಯನ್ನು ಅರಿಕೇಸರಿ ಅರಸನೋರ್ವನೇ ಸರಿಗಟ್ಟ ಬಲ್ಲನು ಎಂಬ ಸ್ವಾಮಿಭಕ್ತಿ ಪ್ರದರ್ಶನ ಪರಾಕಾಷ್ಠೆ ಯ ಸಂದೇಶವು ಸಹ ಈ ಕಾವ್ಯ ಕೃತಿಯ ಮೂಲಕ ವ್ಯಕ್ತವಾಗಿದೆ. ಅರಿಕೇಸರಿ ಅರಸನನ್ನು ಅರ್ಜುನನಿಗೆ ಹೋಲಿಸಿರುವುದರಿಂದ ಕಥೆಯ ಎಲ್ಲಾ ಪಾತ್ರಗಳು ಅರ್ಜನನ ವ್ಯಕ್ತಿತ್ವಕ್ಕೆ ಹೆಚ್ಚು ಪುಷ್ಟಿ ಕೊಡುವಂತೆ ಬೆಸೆಯಲ್ಪಟ್ಟಿವೆ.

*Corresponding Author: ಸ್ಮಿತಾ.ಹೆಚ್.ಎಸ್

ಇದರಿಂದ ಇತರೆ ಪಾತ್ರ ಪೋಷಣೆಗಳು ಮುಸುಕಾಗಿ ಅಥವಾ ತೆರೆಮರೆಗೆ ಸರಿಸಲ್ಪಟ್ಟಿವೆ. ಅರ್ಜುನನ ಪಾತ್ರವೇ ಹೆಚ್ಚು ಪ್ರಕಾಶಮಾನವಾಗಿ ಪ್ರಕಾಶಿಸಲು ನೆರವಾಗುವಂತೆ ಕಾವ್ಯದ ಓಟವೂ ಸಾಗಿ ಬೇರೆ ಎಲ್ಲವೂ ಗೌಣವಾದಂತಿದೆ. ಅಂದಿನ ರಾಜಕೀಯ ತಲ್ಲಣಗಳ ನಡುವೆ ವೇಮುಲವಾಡ ಪ್ರಾಂತ್ಯವನ್ನು ರಕ್ಷಿಸಿ ಅಧಿಕಾರದ ಔನತ್ಯಕ್ಕೆ ಏರಿಸಿದ ಅರಿಕೇಸರಿಯು ಅರ್ಜುನನಷ್ಟೇ ಬಲಶಾಲಿ, ಪರಾಕ್ರಮಿ ಮತ್ತು ಮಹತ್ವಾಕಾಂಕ್ಷಿ ಎಂಬುದು ವಿಕ್ರಮಾರ್ಜುನ ವಿಜಯ ಕಾವ್ಯದ ಸಂಗ್ರಹ ಸಾರ.

8–9–ಮತ್ತು 10 ನೇ ಶತಮಾಣಗಳಲ್ಲಿ ದಕ್ಷಿಣ ಭಾರತವು ಅಂದು ಅತ್ಯಂತ ಪ್ರಕ್ಷುಬ್ಧ ರಾಜಕೀಯವನ್ನು ಎದುರಿಸುತ್ತಿತ್ತು. ಚಾಲುಕ್ಯರ ಅರಸೊತ್ತಿಗೆಗಳು ಹಲವು ವಿಭಾಗಗಳಲ್ಲಿ ಒಡೆದು ಹೋಗಿ ದಕ್ಷಿಣ ಭಾರತದಾದ್ಯಂತ ಶಾಖೆಗಳು ಇದ್ದವು. ರಾಜ್ಯ ವಿಸ್ತರಣೆಯ ಪ್ರಬಲ ಆಕಾಂಕ್ಷೆಯಿಂದ ಈ ಶಾಖೆಗಳ ನಡುವೆ ಕದನ ಸಂಘರ್ಷಗಳು ನಿರಂತರವಾಗಿದ್ದವು. ಉತ್ತರಾಧಿಕಾರ ಹಸ್ತಾಂತರದ ಸಮಯದಲ್ಲಿ ರಾಜಕೀಯ ಒಳಸಂಚುಗಳು, ಪಿತೂರಿಗಳು ಮತ್ತು ಹತ್ಯಾಪರಾಧಗಳು ಹೆಚ್ಚಾಗಿ ದಾಯಾದಿ ಕಲಹಗಳು ವ್ಯಾಪ್ತಿ ಮೀರಿ ನಡೆಯುತ್ತಿದ್ದವು. ರಾಜ ನೀತಿಯ ತತ್ವಗಳು ಗಾಳಿಗೆ ತೂರಲ್ಪಟ್ಟು ತೋಳ್ಬಲ ಮಾತ್ರ ರಾಜ ಸಿಂಹಾಸನಕ್ಕೆ ಅರ್ಹನಾಗಿಸುವ ಅರ್ಹತೆ ಹೊಂದಿದ್ದು ಅಂದಿನ ಎಲ್ಲಾ ರಾಜ ಮನೆತನಗಳು ಸಹ ಇಂತಹ ಕುಟಿಲ ರಾಜನೀತಿಯ ವಿಕೃತ ಕೂಸುಗಳೇ ಆಗಿದ್ದವು ಎಂಬುದು ಪಂಪನ ಕೃತಿಗಳಿಂದ ವ್ಯಕ್ತವಾಗುತ್ತದೆ.

## 10 ನೇ ಶತಮಾನದ ಕಾವ್ಯ ಪ್ರಭಾವ

ಪಂಪನು ತನ್ನ ಒಡೆಯ ಅರಸ ಇಮ್ಮಡಿ ಅರಿಕೇಸರಿಯನ್ನು ಅಂದಿನ ರಾಜನೀತಿಯ ವಿವಿಧ ಆಯಾಮಗಳಲ್ಲಿ ಪ್ರಭಾವಿಸಿ ಕೊಂಡಿದ್ದರಿಂದಲೇ ಅವನ ವ್ಯಕ್ತಿತ್ವ ಚಿತ್ರಣ ಮೂಲ ಕಥೆಗಿಂತ ಭಿನ್ನವೂ ವಿಶಿಷ್ಟವೂ ಆಗಿದೆ. ಉದಾಹರಣೆಗೆ ಅರಿಕೇಸರಿಯ ರಾಜಕೀಯ ಸಂಘರ್ಷಗಳು, ಸ್ವತಂತ್ರ ರಾಜ್ಯ ಕಟ್ಟುವ ಕನಸು, ಕಟ್ಟಿದ ರಾಜ್ಯವನ್ನು ವಿಸ್ತರಿಸುವ ಪ್ರಯತ್ನಗಳು, ವಿಸ್ತರಿಸಲ್ಪಟ್ಟ ರಾಜ್ಯವನ್ನು ಉಳಿಸಿಕೊಳ್ಳುವ ಜವಾಬ್ದಾರಿಗಳು, ಉಳಿಸಿಕೊಂಡ ವಿಶಾಲ ರಾಜ್ಯವನ್ನು ತನ್ನ ಮಕ್ಕಳಿಗೇ ಬಿಟ್ಟು ಹೋಗುವ ಮಹತ್ವಕಾಂಕ್ಷೆಗಳು, ನೆರೆಹೊರೆಯ ಅರಸರೊಂದಿಗೆ ನಿರಂತರ ಕದನ ಕಾರ್ಪಣ್ಯಗಳು, ಇತ್ಯಾದಿ ಎಲ್ಲವೂ ಅಂದಿನ ರಾಜಕೀಯದ ಓಟದಲ್ಲಿ ಬೆಸೆದುಕೊಂಡುಬಂದ ಆಯಾಮಗಳೇ ಆಗಿದ್ದವು.

ಇದೇ ಕಾರಣದಿಂದ ಪಂಪನು ತನ್ನ ಸ್ವಾಮಿಯನ್ನು ಅತೀ ಹತ್ತಿರದಿಂದ ಬಲ್ಲವನಾಗಿದ್ದರಿಂದ ಅವನ ರಾಜಕೀಯ ಮಹತ್ವಾಕಾಂಕ್ಷೆಗಳನ್ನು, ಪಾರಿವಾರಿಕ ಒಳತೋಟಿಗಳನ್ನು, ಮಾನಸಿಕ ತುಮುಲಗಳನ್ನು, ರಾಜಕೀಯ ಮೇಲಾಟಗಳನ್ನು ಬಹು ವಿಧವಾಗಿ ಚಿತ್ರಿಸುವ ಪ್ರಯತ್ನವನ್ನು ಮಾಡುತ್ತಾ ಅರ್ಜುನನ ಪಾತ್ರ ಪೋಷಣೆಯನ್ನು ತನ್ನ ಆಶ್ರಯದಾತನ ರಾಜಕೀಯ ಔನತ್ಯದ ಉತ್ತರಾಭಿಮುಖ ಚಲನೆಯನ್ನು ವಿಶೇಷವಾಗಿ ಅಂದಿನ ರಾಜಕೀಯ ದೃಷ್ಟಾಂತಗಳೊಂದಿಗೆ ಸಮೀಕರಿಸಿದ್ದಾನೆ. ಕೆಲವು ವಿದ್ವಾಂಸರ ಪ್ರಕಾರ ಪಂಪನ ವಿಕ್ರಮಾರ್ಜುನ ವಿಜಯದ ಅರಿಕೇಸರಿ ಅರಸನು ಮಹಾ ಭಾರತದ ಅಸೀಮ ಪರಾಕ್ರಮಿ ಅರ್ಜುನನಿಗಿಂತಲೂ ಮೇಲು. ಈ ಹಿನ್ನೆಲೆಯಲ್ಲಿ ಸಾಗುವ ಪಂಪನ ವಿಕ್ರಮಾರ್ಜುನ ವಿಜಯದ ಕಥಾನಾಯಕನ ಪಾತ್ರ ಪೋಷಣೆ ಹಲವು ವಿಶಿಷ್ಟ ವಿಧಾನಗಳಲ್ಲಿ ಅರಿಕೇಸರಿಯ ರಾಜಕೀಯ ಜೀವನದ ಅವಧಿಯ ಸ್ಪಷ್ಟ ವಿಶ್ಲೇಷಣೆಯನ್ನು ಮಾಡುತ್ತದೆ. ಮಹಾ ಭಾರತದ ಯುದ್ಧದ ನಂತರ ಎಲ್ಲಾ ಪಾಂಡವರು ಮತ್ತು ಹಿರಿಯರು ಸೇರಿ ಮುಂದಿನ ಅರಸನ ಪಟ್ಟಾಭಿಷೇಕವನ್ನು ಕುರಿತು ಚರ್ಚಿಸುತ್ತಾರೆ. ಅರ್ಜುನನನ್ನು ಹಸ್ತಿನಾಪುರದ ಏಕಮೇವ ಚಕ್ರವರ್ತಿಯಾಗಿ ಘೋಶಿಸಲು ಮುಂದಾಗುತ್ತಾರೆ ಮತ್ತು ಅರ್ಜುನನ ಪತ್ನಿ ಸುಭದ್ರೆಯನ್ನು ಪಟ್ಟದ ರಾಣಿಯಾಗಿ ಘೋಶಿಸುತ್ತಾರೆ. ಮಹಾಭಾರತದ ಯುದ್ಧದ ನಂತರ ಕುಂತಿ ಮತ್ತು ಇತರೆ ಪಾಂಡವರು ನಕುಲ ಸಹದೇವರನ್ನೂ ಸೇರಿದಂತೆ ಅರಣ್ಯ ವಾಸಕ್ಕೆ ತೆರಳುವುದು. ಇಲ್ಲಿ ದ್ರೌಪದಿಯು ಸಹ ಶ್ರೀ ಕೃಷ್ಣನ ಸಲಹೆಯಂತೆ ಅರಣ್ಯವಾಸಿಯಾಗುವುದು. ವಿಕ್ರಮಾರ್ಜುನ ವಿಜಯ ಮಹಾಭಾರತದ ಕತೆಯೇ ಆದರೂ ಇದರಲ್ಲಿ ಮಹಾಭಾರತದ ಕತೆಯಲ್ಲಿ ಬರುವ ಹಲವಾರು ಪಾತ್ರಗಳು ಸಂಕಿಪ್ತಗೊಂಡಿವೆ, ಕೆಲವು ಪಾತ್ರಗಳು ನಗಣ್ಯವಾಗಿವೆ ಮತ್ತು ಕೆಲವು ಪಾತ್ರಗಳು ಅವಗಣನೆಗೆ ಒಳಗಾಗಿವೆ. ಮೂಲ ಕಥೆಯ ಎಲ್ಲಾ ಪಾತ್ರಗಳನ್ನು ಏಕಪಕ್ಷೀಯವಾಗಿ ಹಣೆದು ಅರ್ಜುನನಿಗೇ ಪಾತ್ರ ನಿರೂಪಣೆಯ ಔನತ್ಯ ತೋರಿಸಿರುವುದು ಪಂಪನ ಕಾವ್ಯದ ವಿಶೇಷತೆ, ಆದರೆ ಈ ರೀತಿ ಆತ ಕೆಲವು ಕಾವ್ಯ ಲೋಪಗಳನ್ನೂ ಮಾಡಲು ಕಾರಣವೇನು ಎಂದು ತರ್ಕಿಸಿದಾಗ ಆ ಕಾಲದಲ್ಲಿ ಲಭ್ಯವಿದ್ಧ ಮಹಾಭಾರತದ ಕತೆಯನ್ನು ಮಾತ್ರ ಪರಿಗಣಿಸಿದ್ದಾನೆ ಎಂಬ ವಿದ್ವಾಂಸರ ಅನಿಸಿಕೆಗಳು ಎದ್ದು ಕಾಣುತ್ತವೆ. ಅಲ್ಲದೇ ಆ ಕಾಲಕ್ಕಾಗಲೇ ಮೂಲ ಮಹಾಭಾರತದ ಕತೆಯು ಹಲವಾರು ಬಾರಿ ಪರಿಷ್ಕೃತಗೊಂಡು ಪ್ರಾಂತ್ಯವಾರು ಪುನರ್ ಆವೃತ್ತಿಗಳಲ್ಲಿ ಚಲಾವಣೆಯಲ್ಲಿ ಇದ್ದಿತು ಎಂಬುದೂ ಸಹ ಸತ್ಯ. ಹಾಗಾಗಿ ದಕ್ಷಿಣಾತ್ಯ ಮಹಾ ಭಾರತದ ಆವೃತ್ತಿಗಳು ಮೂಲ ಮಹಾ ಭಾರತದ ಕಥಾ ವಸ್ತುವಿಗಿಂತ ಕಾಲ ಕಾಲಕ್ಕೆ ವ್ಯಕ್ತಿಗತ ದೃಷ್ಟಿಕೋನಗಳಿಂದ ಅನೇಕ ಬಾರಿ ಮಾರ್ಪಾಟುಗಳನ್ನು ಹೊಂದಿ ಉತ್ತರಾದಿ ಮಹಾಭಾರತದ ಆವೃತ್ತಿಗಳಿಗಿಂತ ಭಿನ್ನವಾಗಿರಬಹುದು ಎಂದು ತರ್ಕಿಸಲಾಗಿದೆ.. ಮತ್ತೂ ವಿಶೇಷವೆಂದರೆ ಮೂಲ ಮಹಾಭಾರತದ ಭಾಷಾಂತರ ಅಥವಾ ಮೂಲ ಹಸ್ತಪ್ರತಿಯ ಪುನರ್ ಪ್ರತಿಗಳನ್ನು ಮಾಡುವಾಗಲೂ ಕೆಲವು ಉಪಕತೆಗಳು ಮೂಲ ಕತೆಯೊಳಗೆ ನುಸಳಿರಬಹುದು ಅಥವಾ ಆಗ ಪ್ರಚಲಿತವಿದ್ದ ಹೊಸ ಕತೆಗಳು ನವೀನ ನಿರೂಪಣೆಗೆ ಒಗ್ಗುವಂತೆ ಮಾರ್ಪಾಡು ಆಗಿದ್ದಿರಬಹುದು ಅಥವಾ ಪಾತ್ರ ವರ್ಗದ ಹೊಸ ರೀತಿಯ ನಿರೂಪಣೆಯಲ್ಲಿ ಓದುಗರಿಗೆ ಆಕರ್ಷಣೆ ತರುವ ದೃಷ್ಟಿಯಿಂದ ನೂತನ ಆಖ್ಯಾಯಿಕೆಗಳನ್ನು ಸೇರಿಸಿರಬಹುದು ಇದರಿಂದ ಮೂಲ ಮಹಾಭಾರತದ ಹಲವು ವಿಷಯಗಳು ಮತ್ತು ಪ್ರಸಂಗಗಳು ವ್ಯತ್ಯಾಸಗೊಂಡು ಲೋಪಗೊಂಡಿವೆ ಎಂಬುದು ವಿದ್ವಾಂಸರ ಅಭಿಮತ.

ಆದಿ ಕವಿ ಪಂಪನ ಕಾಲಕ್ಕಾಗಲೇ ಹಲವಾರು ಬಾರಿ ಮೂಲ ಮಹಾ ಭಾರತ ಮಹಾ ಕಾವ್ಯವು ಪುನರ್ ರಚನೆಗೊಂಡಿತ್ತು. ಮೂಲ ಸಂಸ್ಕೃತದಿಂದ ಭಾರತದ ವಿವಿಧ ಭಾಷೆಗಳಿಗೆ ಪರಂಪರಾನುಗತವಾಗಿ ಭಾವಾನುವಾದಗೊಂಡು ಮತ್ತು ಸಂಸ್ಕೃತ ಭಾಷೆಯಲ್ಲೇ ಅನೇಕ ಬಾರಿ ಪುನಾರಚಿತವಾಗಿದ್ದಿರಬಹುದು ಎಂದು ಹೇಳಲಾಗಿದೆ. ಈ ಮೂಲ ಕಥೆಯ ಜೊತೆಯಲ್ಲಿ ಬರುವ ಉಪಕಥೆಗಳ ಘಟನೆಗಳೂ ಕೆಲವು ಬೇರೆ ಬೇರೆ ಕಾಲಘಟ್ಟಗಳಲ್ಲಿ ನಡೆದಿರುವುದನ್ನು ಸಂಶೋಧಕರು ಒಪ್ಪಿಕೊಂಡಿದ್ದಾರೆ. ಉದಾಹರಣೆಗೆ ಕಾಳಿದಾಸನ ಬರಹಗಳ ಮತ್ತು ಭಾಸನ ಬರಹಗಳು ಮಹಾ ಭಾರತದಲ್ಲಿ ಉಪ ಕತೆಗಳಂತೆ ನುಸುಳಿರುವುದು. ಅಂದರೆ ಗುಪ್ತರ ಕಾಲಕ್ಕಾಗಲೇ ಕಾಲಿದಾಸನ ಅಭಿಜ್ಞಾನ ಶಾಕುಂತಲ, ಭಾಸನ ಊರು ಭಂಗ ಕೃತಿಗಳು ಮಹಾಭಾರತದ ಉಪಕತೆಗಳನ್ನು ಮೂಲವಾಗಿ ಹೊಂದಿದ್ದವು.

## ಮಹಾಭಾರತದ ಪ್ರಾರಂಭಿಕ ಉಲ್ಲೇಖಗಳು

ಮಹಾ ಭಾರತದ ಪ್ರಥಮ ಉಲ್ಲೇಖ ಪಾಣಿನಿಯ ಅಷ್ಟಾಧ್ಯಾಯಿ ಅಶ್ವಲಾಯನ ಗೃಹ್ಯ ಸೂತ್ರದಲ್ಲಿ ದೊರೆತಿದೆ. ಅಂದರೆ ಭಾರತ ಎಂದು ಕರೆಯಲ್ಪಡುವ 24 ಸಾವಿರ ಶ್ಲೋಕಗಳನ್ನು ಒಳಗೊಂಡ

ಮಹಾಭಾರತ ಕೃತಿಯು ಕ್ರಿ ಪೂ 4ನೇ ಶತಮಾನದಲ್ಲಿಯೇ ಲಭ್ಯವಿದ್ದಿತೆಂದು ತಿಳಿದು ಬರುತ್ತದೆ. ಋಗ್ವೇದದಲ್ಲೂ ಸಹ ಭರತ ಎಂಬ ಬುಡಕಟ್ಟಿನ ಉಲ್ಲೇಖವಿದೆ. ನಂತರದ ಕಾಲದಲ್ಲಿ ವೈದಿಕ ಪಠನದ ರೀತಿಯಲ್ಲಿಯೇ ಮಹಾ ಭಾರತದ ಪಠಣವೂ ಧಾರ್ಮಿಕ ಕೈಕಂರ್ಯಗಳ ಮತ್ತು ಶೈಕ್ಷಣಿಕ ಕಲಿಕೆಯ ಭಾಗವಾಗಿ ಸೇರಿತ್ತು ಎಂದು ಹೇಳಲಾಗಿದೆ. ಅಂದರೆ ಮಹಾಭಾರತವು ರಾಜಕೀಯ ನಾಯಕರು ಮತ್ತು ಅರಸೊತ್ತಿಗೆಗಳಿಗೆ ದಿಕ್ಸೂಚಿಯಂತೆ ಇದ್ದಿತು.

**ಮಹಾ ಭಾರತದ ಉಪ ಕಥೆಗಳು ಮತ್ತ ಉಪ ಗ್ರಂಥಗಳು**

ಮಹಾ ಭಾರತದ ಅನೇಕ ಭಾಗಗಳು ಉಪ ಕಥೆಗಳು ಮತ್ತ ಉಪ ಗ್ರಂಥಗಳು ಪ್ರಾಚೀನ ಭಾರತದ ತತ್ವ ಶಾಸ್ತ್ರಗಳನ್ನು ವರ್ಣಿಸುತ್ತವೆ ವೇದಾಂತ, ಸಾಂಖ್ಯ ಯೋಗ, ಪಂಚರಾತ್ರ ಯೋಗ ಮೊದಲಾದ ತಾತ್ವಿಕ ಸಂಪ್ರದಾಯಗಳನ್ನು ಒಳಗೊಂಡ ಮಹಾಭಾರತ ಭಾರತೀಯ ತತ್ವ ಶಾಸ್ತ್ರದ ಆಕರವೆಂದೇ ಪರಿಗಣಿಸಲ್ಪಟ್ಟಿದೆ. ಮಹಾ ಭಾರತದ ಪ್ರತಿಯೊಂದು ಪರ್ವವೂ ಬಹಳ ಮಹತ್ವದ ಲೌಕಿಕ ನೀತಿಯನ್ನು ಜನರಿಗೆ ಪರಿಚಯಿಸುತ್ತದೆ. ಅಂದರೆ ಸಮಾಜದ ಉತ್ತಮ ಬೆಳವಣಿಗೆಗೆ ಅವಶ್ಯಕವೆನಿಸುವ ಎಲ್ಲ ತತ್ವೋಪದೇಶಗಳನ್ನು ಮಹಾ ಭಾರತ ಕೃತಿಯು ಒಳಗೊಂಡಿದೆ. ಆದ್ದರಿಂದ ಕಾಲಕಾಲಕ್ಕೆ ಇದನ್ನು ಸಮಯಾನುಸಾರ ಮಾರ್ಪಡಿಸಿ ಪುನರ್ ರಚಿಸಲಾಗಿದೆ ಎನ್ನುವ ಮತ್ತೊಂದು ಮಾತೂ ಇದೆ.

**ಮಹಾ ಭಾರತದ ಲೋಕೋತ್ತರ ತತ್ವಗಳು**

ಪಂಪನ ವಿಕ್ರಮಾರ್ಜುನ ವಿಜಯ ಕೃತಿಯು ಅಂದಿನ ರಾಜಕೀಯದ ಏಳು ಬೀಳುಗಳ ಚರ್ಚೆಯ ಜೊತೆಗೆ ಪರಾಕ್ರಮಿಗಳ ತೋಳ್ಬಲ ಮತ್ತು ಮಹತ್ವಾಕಾಂಕ್ಷೆಗಳಿಗೆ ಮಾತ್ರ ರಾಜ್ಯಲಕ್ಷ್ಮೀ ಒಲಿಯುತ್ತಾಳೆ ಎಂಬ ಆ ಕಾಲಘಟ್ಟದ ರಾಜನೀತಿ ಸಂದೇಶವನ್ನು ನೀಡುತ್ತಾ ಚಾಲುಕ್ಯ ಅರಸ ಅರಿಕೇಸರಿಯು ವೇಮುಲವಾಡ ಪ್ರಾಂತ್ಯವನ್ನು ಸುಸ್ಥಿರ ಅಡಿಪಾಯದ ಮೇಲೆ ಕಟ್ಟಿ ನಿರ್ಮಿಸಿದ ಹಂತಗಳನ್ನು ಅರಿಯಲು ಸಹಕಾರಿಯಾಗಿದೆ.

**ಅರಿಕೇಸರಿಯ ಕುರಿತು ಶಾಸನಗಳ ಲಭ್ಯತೆ**

ವೇಮುಲವಾಡದ ಅರಸರ ರಾಜಕೀಯ ಏಳು ಬೀಳುಗಳನ್ನು ಅರಿಯಲು ಹಲವಾರು ಶಾಸನಗಳು ಲಭ್ಯವಿದ್ದು ಅದರಲ್ಲಿ ವೇಮುಲವಾಡ, ವಾರಂಗಲ್, ಶೋಲಾಪೂರ್, ನಾಂದೇಡ್, ಅಮರಾವತಿ, ಹೈದರಾಬಾದ್‌ಗಳಲ್ಲಿ ದೊರಕಿರುವ ಶಾಸನ ಆಕರಗಳನ್ನು ಪ್ರಮುಖವಾಗಿ ಗುರುತಿಸಲಾಗಿದೆ. ಇಮ್ಮಡಿ ಅರಿಕೇಸರಿಯು ಈರ್ವರು ಪತ್ನಿಯರನ್ನು ಹೊಂದಿದ್ದು ಅವರು ರಾಜ ಕುಟುಂಬದವರಾಗಿದ್ದು ಅರಿಕೇಸರಿಯ ರಾಜಕೀಯ ಬಲಿಷ್ಠತೆಗೆ ಉಪಯುಕ್ತವೆನಿಸಿದರು. ಅರಿಕೇಸರಿಯು ಇಮ್ಮಡಿ ನರಸಿಂಹನ ಮಗನಾಗಿದ್ದು ಇರ್ವರು ರಾಷ್ಟ್ರಕೂಟ ರಾಜ ಮನೆತನಕ್ಕೆ ಸೇರಿದ ಕುಮಾರಿಯರನ್ನು ಪತ್ನಿಯರನ್ನಾಗಿ ಹೊಂದಿದ್ದನು. ಲೋಕಾಂಬಿಕಾ ಮತ್ತು ರೇವಕನ್ನೀರಮಡಿ. ಇವನ ತಾಯಿ ಜಾಕವ್ವೆ ಮುಮ್ಮಡಿ ಇಂದ್ರನ ಸಹೋದರಿಯಾಗಿದ್ದಳು. ರಾಜಕೀಯ ಪರಿಸ್ಥಿತಿಗಳು ಕೇವಲ ತೋಲ್ಬಲವನ್ನು ಆಧರಿಸಿದ್ದು ಉತ್ತರಾಧಿಕಾರದ ಸಂಘರ್ಷಗಳು, ಪಟ್ಟಾಭಿಷೇಕದ ಕದನಗಳು, ಬಲಗೊಳ್ಳುತ್ತಿದ್ದ ರಾಜ್ಯ ವಿಸ್ತರಣಾಕಾಂಕ್ಷೆಗಳ ವ್ಯಾಪ್ತಿ ಇವುಗಳ ನಡುವೆ ಅರಿಕೇಸರಿ ಅರಸನು ಅಧಿಕಾರ ಹೊಂದಿದ್ದರೂ ತುಮುಲಗಳನ್ನು ಅನುಭವಿಸುತ್ತಿದ್ದನು. ಇವನು ರಾಷ್ಟ್ರಕೂಟ ಚಕ್ರವರ್ತಿಗಳಾದ ನಾಲ್ವಡಿ ಗೋವಿಂದ ಮತ್ತು ಮುಮ್ಮಡಿ ಕೃಷ್ಣ ಇವರ ಕಾಲದ ಪ್ರಮುಖ ಸಾಮಂತ ಅರಸ. ಇವನು ರಾಷ್ಟ್ರಕೂಟ ಅರಸರ ರಾಜಕೀಯದಲ್ಲಿ ಮಧ್ಯಸ್ಥಿಕೆ ವಹಿಸಿ ನಾಲ್ವಡಿ ಗೋವಿಂದನನ್ನು ಪದಚ್ಯುತಗೊಳಿಸಿ ಮುಮ್ಮಡಿ ಅಮೋಘ 'ವರ್ಷನನ್ನು ರಾಷ್ಟ್ರಕೂಟ ಸಿಂಹಾಸನಕ್ಕೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದನು. ಅರಿಕೇಸರಿಯ ಸಾಹಸಗಳಲ್ಲಿ ರಾಷ್ಟ್ರಕೂಟ ಚಕ್ರವರ್ತಿ ನಾಲ್ವಡಿ ಗೊವಿಂದನು ಚಾಲುಕ್ಯರ ವಿಜಯಾದಿತ್ಯನ ಮೇಲೆ ಯುದ್ಧ ಮಾಡಲು ಮುಂದಾಗಿ ಸೋಲಿನ ಹಂತ ತಲುಪಿದಾಗ ಅರಿಕೇಸರಿಯ ಸಹಾಯವನ್ನು ಯಾಚಿಸಿದನು. ಹೀಗೆ ತನ್ನ ಶರಣು ಬಂದ ಬಂದ ನಾಲ್ವಡಿ ಗೋವಿಂದನಿಗೆ ಅಭಯ ರಕ್ಷಣೆ ನೀಡಿದ ಎಂದು ಪಂಪನು ತಿಳಿಸುತ್ತಾನೆ. ಇದು ವೇಮುಲವಾಡದ ಶಾಸನದಿಂದಲೂ ಧೃಡಪಟ್ಟಿದೆ. ರಾಷ್ಟ್ರಕೂಟ ಅರಸ ಮುಮ್ಮಡಿ ಇಂದ್ರನ ಕಾಲಕ್ಕೆ ಅಂದರೆ ಕ್ರಿಶ 914–922 ವೆಂಗಿಯ ಚಾಲುಕ್ಯರಲ್ಲಿ ಅರಸೊತ್ತಿಗೆಯ ವಿಚಾರದಲ್ಲಿ ಕೌಟುಂಬಿಕ ಕಲಹಗಳು ತಲೆ ಎತ್ತಿ ರಾಜಕೀಯ ಗೊಂದಲುಗಳು ತಲೆ ದೋರಿದ್ದವು. ನಾಲ್ವಡಿ ಗೋವಿಂದನು ವೆಂಗಿಯ ಚಾಲುಕ್ಯ ಅರಸ ಇಮ್ಮಡಿ ಯುದ್ಧಮಲ್ಲನಿಗೆ ನೆರವು ನೀಡಿದ ಇದು ವಿಜಯಾದಿತ್ಯನಿಗೆ ಸಹಿಸಲು ಆಗದೇ ಪ್ರತಿಭಟಿಸಿದ ಇದನ್ನು ನಿರೀಕ್ಷಿಸಿದ್ದ ನಾಲ್ವಡಿ ಗೋವಿಂದನು ತನ್ನ ಸಾಮಂತರನ್ನು ಸನ್ನದ್ದು ಗೊಳಿಸಿ ವಿಜಯಾದಿತ್ಯನನ್ನು ಹಣಿಯಲು ಮುಂದಾದನು ಎಂಬ ಹಿನ್ನೆಲೆಯಲ್ಲಿ ವೇಮುಲವಾಡದ ರಾಜಕೀಯ ವಿಷಯಗಳು ಹೆಚ್ಚು ಸಂಶೋಧನೆಗೆ ಒಳಪಡಬೇಕಿದೆ. ಸ್ವಾಮಿ ನಿಷ್ಠೆಯ ಕುರುಹುಗಳನ್ನು ತನ್ನ ಮಹಾ ಕಾವ್ಯದುದ್ದಕ್ಕೂ ಬೆಸೆದಂತೆ ಜೋಡಿಸಿರುವ ಪಂಪನು ಎಲ್ಲೂ ತನ್ನ ಸ್ವಾಮಿಭಕ್ತಿ ಮತ್ತು ಸ್ವಾಮಿನಿಷ್ಠೆಗಳು ಲೋಪವಾಗದಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾನೆ. ಮಹಾಕಾವ್ಯದ ಎಲ್ಲಾ ಪ್ರಕರಣಗಳು ಅರ್ಜುನನ ಹಿರಿಮೆ ಮತ್ತು ಗರಿಮೆಯನ್ನು ಎತ್ತಿ ಹಿಡಿಯುವುದಕ್ಕಷ್ಟೇ ಬಳಸಿಕೊಳ್ಳಲ್ಪಟ್ಟಿದೆ ಎಂಬದು ಸಹ ಸತ್ಯವಾದ ವಿಷಯ. ಆ ಕಾರಣಕ್ಕಾಗಿಯೇ ಅರಿಕೇಸರಿಗೆ ಸಾಮಂತ ಚೂಡಾಮಣಿ, ಉದಾತ್ತ ನಾರಾಯಣ, ಆರೂಢ ಸರ್ವಜ್ಞ, ಕದನ ತ್ರಿನೇತ್ರ, ಸಹಜ ಮನೋಜ, ಶರಣಾಗತ ಜಲನಿಧಿ, ಗುಣಾರ್ಣವ, ಪ್ರಿಯ ಗಳ್ಳ ಮೊದಲಾದ ಬಿರುದಗಳೂ ಇದ್ದವೆಂದು ಪಂಪನು ತಿಳಿಸುತ್ತಾನೆ. ಹೀಗೆ ಮಾಡುವಾಗ ಪಂಪನು ಮೂಲ ಮಹಾ ಭಾರತದಲ್ಲಿ ಇರುವಂತೆ ದ್ರೌಪದಿ ವಸ್ತ್ರಾಪಹರಣದ ಸಮಯದಲ್ಲಿನ ಶ್ರೀ ಕೃಷ್ಣನ ಮಹತ್ವದ ಪಾತ್ರವನ್ನು, ಮಹಾಭಾರತದ ಯುಧ್ಧಾ ನಂತರ ಅರ್ಜುನನಿಗೇ ಪಟ್ಟಾಭಿಷೇಕ ಮಾಡಿದಂತೆಯೂ. ಅರ್ಜುನನ ಜೊತೆ ದ್ರೌಪದಿಯ ಬದಲು ಸುಭದ್ರೆಯು ಪಟ್ಟ ಮಹಿಷಿ ಯಾದೆಂತೆಯೂ ಸೇರಿದಂತೆ ರಾಜಸೂಯಯಾಗದಂತಹ ಪ್ರಮುಖ ಘಟನೆಯನ್ನು ನಿರ್ಲಕ್ಷಿಸಿರುವುದು ಸಹಜವೇ ಆಗಿದೆ ಎಂಬ ವಿಷಯಗಳನ್ನು ಯಾರೂ ತೆಗೆದು ಹಾಕಲು ಸಾಧ್ಯವಿಲ್ಲ ಈ ಮಹಾ ಕಾವ್ಯದ ಅಂತಿಮ ಭಾಗದಲ್ಲಿ ಪಂಪನು ತನ್ನ ವಂಶವನ್ನು ವೈದಿಕ ಹಿನ್ನೆಲೆಯಿಂದ ಜೈನ ಧರ್ಮಕ್ಕೆ ಮತಾಂತರಗೊಂಡ ಹಿನ್ನೆಲೆಗೆ ಅನುವಾಗಿ ಜೈನ ಧರ್ಮಿಯ ನೆಲೆಗಳನ್ನು ವರ್ಣಿಸಿಕೊಂಡಿರುವುದು ಆತನು ಪ್ರಚಲಿತವಾಗಿದ್ದ ರಾಜಕೀಯ ವಿದ್ಯಮಾನಗಳ ಹಿಂಸಾತ್ಮಕ ಸ್ವರೂಪಗಳಿಂದ ಬೇಸತ್ತು ನಿರ್ದಿಷ್ಟ ಕಾಲಮಾನದ ರಾಜಕೀಯ ಔಚಿತ್ಯವನ್ನು ತನ್ನ ಕಾವ್ಯ ದೃಷ್ಟಿಯಲ್ಲಿ ಸಂಭಾವಿತತ್ವಕ್ಕೆ ಮನ್ನಣೆ ಕೊಟ್ಟು ಬಳಸಿರುವುದು ಪಂಪನ ಕಾವ್ಯ ಗರಿಮೆಯನ್ನು ಎತ್ತಿ ಹಿಡಿಯುತ್ತದೆ?

ಅರಿಕೇಸರಿಯ ಆಸ್ಥಾನ ಕವಿಯಾಗಿ ಪಂಪನು ವಿಕ್ರಮಾರ್ಜುನ ವಿಜಯವನ್ನು ರಚಿಸಿದ್ದು ಇವನ ಸಹೋದರನಾದ ಜಿನ ವಲ್ಲಭನು ಈಗ ತೆಲಂಗಾಣ ರಾಜ್ಯದ ಕರೀಂ ಜಿಲ್ಲೆಗೆ ಸೇರಿರುವ ಬೊಮ್ಮಲು ಗುಟ್ಟದಲ್ಲಿ ತ್ರಿಭೂವನ ತಿಲಕ ಜಿನಾಲಯವನ್ನು ನಿರ್ಮಿಸಿದನು. ಜಿನ ವಲ್ಲಭನ ಪತ್ನಿ ಭಾಗ್ಯಬ್ಬೆಯು ಲೋಹದ ಚತುರ್ ವಿಂಶತಿ ಜಿನ ಬಿಂಬವನ್ನು ಮತ್ತು ಒಂದು ಜೈನ ಬಸದಿಯನ್ನೂ ನಿರ್ಮಿಸಿದಳು, ಜಿನವಲ್ಲಭನು ತೆಲಂಗಾಣದ ಕುರಿಕಿಯಾಲ ಗ್ರಾಮದ ಬೊಮ್ಮಲಮ್ಮಗುಟ್ಟ ಎಂಬಲ್ಲಿ ಸ್ಥಾಪಿಸಿದ ತ್ರಿಭಾಷಾ ಶಾಸನದ ಪ್ರಕಾರ

(ಕನ್ನಡ ಸಂಸ್ಕೃತ ಮತ್ತು ತೆಲುಗು) ಇನ್ನೂ ಅನೇಕ ಜಿನ ಬಿಂಬಗಳನ್ನು ಆತನು ಮಾಡಿಸಿದ್ದನು. ಇದರ ಕುರಿತು ಹೆಚ್ಚಿನ ಸಂಶೋಧನೆಯ ಅಗತ್ಯವಿದೆ. 10 ನೇ ಶತಮಾನದ ಸುಮಾರಿಗೆ ಜೈನ ಕೇಂದ್ರವಾಗಿ ಗುರುತಿಸಿ ಕೊಂಡಿದ್ದ ಬೊಮ್ಮಲಮ್ಮ ತಳ್ಳಿ ಗುಟ್ಟ ಎಂದು ಕರೆಯಲ್ಪಡುವ ಸುಮಾರು 1055 ವರ್ಷಗಳಷ್ಟು ಪುರಾತನವಾದ್ದೀ ಬೆಟ್ಟವು ಐತಿಹಾಸಿಕ ಪ್ರಾಮುಖ್ಯತೆ ಹೊಂದಿದೆ. ಕ್ರಿಶ 945 ರಲ್ಲಿಯೇ ಈ ಬೆಟ್ಟದಲ್ಲಿ ಹಲವಾರು ಜೈನ ತೀರ್ಥಂಕರರ ವಿಗ್ರಹಗಳನ್ನು ಕೆತ್ತಲಾಗಿದೆ ಈ ಬೆಟ್ಟದ ಸುತ್ತಲೂ ನಡೆಯುತ್ತಿರುವ ಗ್ರಾನೈಟ್ ಗಣಿಗಾರಿಕೆ ತಪ್ಪಿಸಿ ಬೆಟ್ಟಕ್ಕೆ ಇರುವ ಅಪಾಯವನ್ನು ತಪ್ಪಿಸಬೇಕು ಎಂಬ ಕೂಗೂ ಮೊದಲಿನಿಂದಲೂ ಕೇಳಿ ಬಂದಿದೆ. ವೇಮುಲವಾಡವು ತೆಲುಗು ಮತ್ತು ಕನ್ನಡ ಭಾಷಿಕರ ಮಿಶ್ರ ನೆಲೆಯಾಗಿ ಗುರುತಿಸಲ್ಪಟ್ಟಿತು ಯಾವ ಕಾಲದಿಂದ ಗುರುತಿಸಲ್ಪಟ್ಟಿತು ಎಂಬುದು ಸಂಶೋಧನಾರ್ಹ ವಿಷಯ. ಅಲ್ಲದೇ ವೇಮುಲವಾಡದ ಜೈನ ಪಂಡಿತರು ಅಂದರೆ ಬ್ರಾಹ್ಮಣರು (ಜೈನ ಧರ್ಮಕ್ಕೆ ಮತಾಂತರ ಗೊಂಡವರು) ರಚಿಸಿರಬಹುದಾದ ಹಲವು ಸಮಕಾಲೀನ ಜೈನ ಗ್ರಂಥಗಳನ್ನು ಅರಿಕೇಸರಿಯ ರಾಜಕೀಯ ನಿಲುವುಗಳೊಡನೆ ಸಮಾಲೋಚಿಸುವುದು ಸಂಶೋಧನೆಗೆ ಹೊಸ ಆಯಾಮಗಳನ್ನು ತೆರೆದಿಡುತ್ತದೆ.

## ಉಪ ಸಂಹಾರ

ಹೀಗೆ ಪಂಪನ ಕಾಲದ ಪ್ರಸಕ್ತ ರಾಜನೀತಿಯ ವಿಶ್ಲೇಷಣಾತ್ಮಕ ಕೃತಿಯಾಗಿ ವಿಕ್ರಮಾರ್ಜುನ ವಿಜಯವನ್ನು ನೋಡುವುದು ಹೊಸ ಸಂಶೋಧನೆಗೆ ಅವಕಾಶ ನೀಡುತ್ತದೆ. ಮಹಾಭಾರತದ ಹಲವಾರು ಆವೃತ್ತಿಗಳು ಇನ್ನೂ ಸಂಪೂರ್ಣವಾಗಿ ಲಭ್ಯವಾಗಿಲ್ಲ ಅಥವಾ ಅವುಗಳ ಉಪಲಬ್ಧತೆ ಕುರಿತು ಮಾಹಿತಿ ದೊರೆತಿಲ್ಲ ಪಂಪನ ಸಮಯಕ್ಕೆ ಲಭ್ಯವಿದ್ದ ದಕ್ಷಿಣಾತ್ಯ ಮಹಾ ಭಾರತದ ಪರಿಷ್ಕೃತ ಕಥಾ ನಿರೂಪಣೆಗಳು ರಾಜಕೀಯ ವಿಷಯಗಳಿಗೆ ಹೆಚ್ಚು ಒತ್ತು ಕೊಟ್ಟಿರುವ ಸಾಧ್ಯತೆ ಇದೆ. ಇದಕ್ಕೆ ಹಿನ್ನೆಲೆಯಾಗಿ ವೇಮುಲವಾಡದ ಪುರಾತತ್ವ ನೆಲೆಗಳನ್ನು ಪುನರ್ ಸಂಶೋಧಿಸುವ ಅನಿವಾರ್ಯತೆಯೂ ಇದೆ. ಅಲ್ಲದೇ ಅರಿಕೇಸರಿ ಅರಸನ ಬಗ್ಗೆ ಈಗಾಗಲೇ ದೊರಕಿರುವ ಸಾಹಿತ್ಯಿಕ ಮತ್ತು ಪುರಾತತ್ವ ಆಕರಗಳನ್ನು ಮರು ಶೋಧಿಸುವ ಅಗತ್ಯತೆ ಇದೆ.

## ಉಲ್ಲೇಖ ಗ್ರಂಥಸೂಚಿ


1. ಅನಂತ ರಂಗಾಚಾರ್ ಎನ್ – ಪಂಪ ಮಹಾಭಾರತ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು 2014
2. ಅನಂತ ರಾಮರಾವ್ ಕೆ – ಸಂಪೂರ್ಣ ಮಹಾಭಾರತ (18 ಪರ್ವಗಳು), ವಿದ್ಯಾ ಪಬ್ಲಿಷಿಂಗ್ ಹೌಸ್, ಮಂಗಳೂರು, 2015
3. ಅಕ್ಷಯ್ ಕುಮಾರ್ – ಕಾವ್ಯ, ರಾಜಕೀಯ ಮತ್ತು ಸಂಸ್ಕೃತಿ, ಭಾರತೀಯ ಪಠ್ಯಗಳು ಮತ್ತು ಸಂದರ್ಭಗಳ ಕುರಿತು, ರೂಟಲೆಡ್ಜ್ ಪ್ರಕಾಶನ, 2014
4. ಬೆಳ್ಳಾವೆ ವೆಂಕಟ ನಾರಯಣಪ್ಪ – ಪಂಪ ಭಾರತದ ಉಪೋದ್ಘಾತ, ಪಂಪ ಸಂಪುಟ 18, 1999
5. ಕನ್ನಡ ವಿಶ್ವ ಕೋಶ, ಮೈಸೂರು ಪ್ರಸಾರಾಂಗ, ಮೈಸೂರು ವಿಶ್ವ ವಿದ್ಯಾಲಯ, ಮೈಸೂರು, 2000
6. ಕನ್ನಡ ವಿಷಯ ವಿಶ್ವ ಕೋಶ ಮೈಸೂರು ಪ್ರಸಾರಾಂಗ, ಮೈಸೂರು ವಿಶ್ವ ವಿದ್ಯಾಲಯ, ಮೈಸೂರು, 2000
7. ಕೃಷ್ಣರಾವ್ ಎಮ್ ವಿ ಕರ್ನಾಟಕ ಇತಿಹಾಸ ದರ್ಶನ, ಬೆಂಗಳೂರು, 1999
8. ಕೊಲ್ಲೂರು ಸೂರ್ಯ ನಾರಾಯಣ– ದಿ ಇನ್ಸ್ಕ್ರಿಪ್ಷನ್ಸ್ ಆಫ್ ಮೈನರ್ ಚಾಲುಕ್ಯ ಡೈನಾಸ್ಟೀಸ್ ಆಫ್ ಆಂದ್ರ ಪ್ರದೇಶ್, 1993
9. ನರಹರಿ ಅಚಾರ್ ಬಿ ಎಸ್ – ಶ್ರೀ ಕೃಷ್ಣನ ರಾಯಭಾರ ಮತ್ತು ಯುದ್ಧಕಾಲ ನಿರ್ಣಯ
10. ನರಸಿಂಹಾಚಾರ್ಯ ಆರ್. – ಕನ್ನಡ ಸಾಹಿತ್ಯ ಚರಿತ್ರೆ ಕರ್ನಾಟಕ ಸರ್ಕಾರದ ಪ್ರಕಟಣೆ 1992
11. ನವ್ಯ ಸಾಹಿತ್ಯದ ಪಠ್ಯಗಳು, ಮೈಸೂರು ವಿಶ್ವ ವಿದ್ಯಾಲಯ ಪ್ರಕಟಣೆ, ಮೈಸೂರು, ಪ್ರಸಾರಾಂಗ, 2014
12. ಶೇಷಾಚಲ ಶರ್ಮ ಎಸ್. – ಕನ್ನಡ ಮಹಾ ಭಾರತ (ಅನುವಾದ) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವ ವಿದ್ಯಾಲಯ, ಮೈಸೂರು
13. ವಿಜಯ್ ಶಂಕರ್ ಎಸ್ ಆರ್, ನವ್ಯ ಸಾಹಿತ್ಯ, ಕನ್ನಡ ಸಾಹಿತ್ಯ ಅಕಾಡೆಮಿ ಪ್ರಕಟಿತ, 2022
14. ವೆಂಕಟನಾರಾಯಣಪ್ಪ ಎನ್ – ದಿ ಚಾಳುಕ್ಯಾಸ್ ಆಫ್ ವೇಮುಲವಾಡ, 1957
15. ಪಂಪ – ವಿಕಿ ಸೋರ್ಸ್ ವೆಬ್‌ಸೈಟ್, 2025
16. ಪಂಪನ ಕೃತಿಗಳು – ಒಂದು ವಿಶ್ಲೇಷಣೆ, ವೆಬ್‌ಸೈಟ್ 2025.